ಮೈಸೂರು ನಗರದಲ್ಲಿ ಏಷ್ಯನ್ ಅಭಿವೃದ್ಧಿ ಸಹಕಾರದ ಅಡಿಯಲ್ಲಿ ಮೇಳಾಪುರ ಯೋಜನೆ

353 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ನಗರ ನರಸಿಂಹರಾಜ ಕ್ಷೇತ್ರ ಏಷಿಯನ್ ಡೆವಲಪ್‌ಮೆಂಟ್ ಸಹಕಾರ ಅನ್ವಯ ಮೇಳಾಪುರ ಯೋಜನೆ ಈಗ ಯಾವ ಹಂತದಲ್ಲಿದೆ?

ಆ) ಈ ಯೋಜನೆಯನ್ನು ಪ್ರಾರಂಭಿಸಲು ಬೇಕಾದ ಅಂತಿಮ ಭೂಮಾಪನ ಕಾರ್ಯ ಮುಕ್ತಾಯವಾಗಿದ್ದರೂ ಸಹ ಕೆಲಸ ಪ್ರಾರಂಭ ಮಾಡದೇ ಇರಲು ಕಾರಣವೇನು?

ಇ) ಯಾವಾಗ ಈ ಕೆಲಸ ಪ್ರಾರಂಭವಾಗುವುದು ಹಾಗೂ ಯಾವ ವರ್ಷದಲ್ಲಿ ಈ ಕಾಮಗಾರಿ ಮುಕ್ತಾಯವಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಏಷಿಯಾ ಅಭಿವೃದ್ಧಿ ಬ್ಯಾಂಕಿನ ಆರ್ಥಿಕ ಸಹಾಯದಿಂದ ಕರ್ನಾಟಕ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಮೈಸೂರು ನಗರಕ್ಕೆ 4ನೇ ಹಂತ ಕುಡಿಯುವ ನೀರೊದಗಿಸುವ ಯೋಜನೆಯನ್ನು ಕೈಗೊಳ್ಳಲು 31.47 ಕೋಟಿ ರೂಪಾಯಿಗಳಿಗೆ ಸರ್ಕಾರದಿಂದ ಅನುಮೋದನೆ ದೊರೆತ್ತಿರುತ್ತದೆ. ಈ ಯೋಜನೆ ಕೈಗೊಳ್ಳಲು ಗುತ್ತಿಗೆದಾರರನ್ನು ಗುರುತಿಸಲು ಅವರ ಪೂರ್ವಾರ್ಹತೆ ಬಗ್ಗೆ ಕೆ.ಯು.ಎ ಡಿ.ಎಫ್.ಸಿ. ಯವರು ಅರ್ಜಿಗಳನ್ನು ಕರೆದಿದ್ದು ಕಾಮಗಾರಿಗಳ ಗುತ್ತಿಗೆಗಳಲ್ಲಿ ಪಾಲ್ಗೊಳ್ಳಲು ಗುತ್ತಿಗೆದಾರ ಪಟ್ಟಿಯನ್ನು ಸಿದ್ಧಪಡಿಸಿದೆ. ಕಾಮಗಾರಿಗಳಿಗೆ ಟೆಂಡರನ್ನು ಆಗಸ್ಟ್ ತಿಂಗಳಿಂದ ಹಂತ ಹಂತವಾಗಿ ಕರೆಯಲಾಗುವುದು ಹಾಗೂ ಕಾಮಗಾರಿಗಳನ್ನು 1997ರ ಅಂತ್ಯಕ್ಕೆ ಪ್ರಾರಂಭಿಸಲಾಗುವುದು.

ಆ) ಈ ಯೋಜನೆಯಲ್ಲಿ ಮೂಲಸ್ಥಾವರ ಕಾಮಗಾರಿಗೆ ಮೇಳಾಪುರದಲ್ಲಿ ಈಗಾಗಲೇ ಬೇಕಾಗುವ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇತರೆ ಕಾಮಗಾರಿಗಳಾದ ಕೊಳವೆ ಮಾರ್ಗ ಜಲಸಂಗ್ರಹಾಗಾರ ಹಾಗೂ ಜಲ ಶುದ್ಧೀಕರಣಾಗಾರಕ್ಕೆ ಬೇಕಾಗುವ ಜಮೀನು ಸ್ವಾಧೀನಕ್ರಮವು ಅಂತಿಮ ಹಂತದಲ್ಲಿದೆ. ಕಾಮಗಾರಿಗಳಿಗೆ ಈಗ ಟೆಂಡರುಗಳನ್ನು ಕರೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಈ ಕೆಲಸವು 97ರ ಅಂತಿಮದಲ್ಲಿ ಪ್ರಾರಂಭವಾಗಲಿದ್ದು ಯೋಜನೆಯನ್ನು 2000 ಇಸವಿಯ ಅಂತ್ಯದೊಳಗೆ ಚಾಲೂ ಮಾಡುವ ಕಾರ್ಯಕ್ರಮ ಇದೆ.

ತಿಪಟೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

355 - ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992 ರಿಂದಲೂ ತಿಪಟೂರು ಮತ್ತು ಅರಸೀಕೆರೆ ಪಟ್ಟಣಕ್ಕೆ ಕುಡಿಯುವ ನೀರಿನ

ಯೋಜನೆಯು ಪೂರ್ಣಗೊಳ್ಳದೇ ಅನೇಕ ಸಲ ಸಚಿವರು ಬಂದು ಉದ್ಘಾಟನೆ ಸಹ ಮಾಡಿದರೂ ಯೋಜನೆ ಕಾರ್ಯಗತವಾಗಿಲ್ಲ, ಕಾರಣವೇನು?

ಆ) ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುವಿರಿ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಈ ಯೋಜನೆಯು ಪೂರ್ಣಗೊಂಡಿದ್ದು ಈಗ ಕಾರ್ಯಾರಂಭಿಸಲು ಸಿದ್ಧವಾಗಿದೆ. ಆದರೆ ವಿದ್ಯುತ್ ಶಕ್ತಿಯ ಸಂಪರ್ಕ ಇನ್ನು ಸಿಗದೆ ಇರುವ ಕಾರಣ ಯೋಜನೆಯನ್ನು ಚಾಲೂ ಮಾಡಲು ತಡವಾಗಿದೆ.

ಆ) ವಿದ್ಯುತ್ ಸಂಪರ್ಕ ಸಿಕ್ಕಿದ ಕೂಡಲೇ ಪ್ರಾರಂಬ ಮಾಡಲಾಗುವುದು.

ಬಂಟವಾಳ ತಾಲ್ಲೂಕಿನ ಬೆಂಜನ ಪದವುನಲ್ಲಿ ಕೈಗಾರಿಕಾ ಕೇಂದ್ರ

356 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ತಾಲ್ಲೂಕಿನ ಬೆಂಜನಪದವು ಪ್ರದೇಶವನ್ನು ಕೈಗಾರಿಕಾ ಕೇಂದ್ರವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದರ ವಿರುದ್ಧ ಸ್ಥಳೀಯರು ಚಳುವಳಿ ಹೂಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಬಂದಿದೆ.

ಇ) ಈ ಜಮೀನಿನ ಭೂಸ್ವಾಧೀನದ ಬಗ್ಗೆ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಕಾರಣ, ಭೂಸ್ವಾಧೀನದ ವಿರೋಧದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಹುಬ್ಬಳ್ಳಿಗೆ ವರ್ಗಾಯಿಸಿರುವುದು.

357 - ಶ್ರೀ ರಾಜಶೇಖರ್ ವಿ. ಶೀಲವಂತ (ಗುಳ್ಳೇದಗುಡ್ಡ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸಿದರ ಉದ್ದೇಶವೇನು?